# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 286 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 21.12.2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸ್ಥಿರಾಸ್ತಿಗಳ ಮಾರಾಟದ ಕ್ರಯಪತ್ರಗಳು ನೋಂದಣಿಯಾದ ಎಷ್ಟು ದಿನಗಳ ನಂತರದಲ್ಲಿ ಖಾತೆ ಮತ್ತು ಪಹಣಿ ಬದಲಾವಣೆ ಮಾಡುವ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿದೆ; | ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 26 ಎಲ್‌ಜಿಪಿ 2022, ದಿನಾಂಕ:29.09.2022ರನ್ವಯ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 64(3) ಹಾಗೂ ನಿಯಮ 66ಕ್ಕೆ ತಿದ್ದುಪಡಿ ತರಲಾಗಿದ್ದು, ನೋಂದಾಯಿತ ದಸ್ತವೇಜುಗಳ ಮ್ಯುಟೇಷನ್‌ಗೆ ಸಂಬಂಧಿಸಿದ ನೋಟೀಸು ಅವಧಿಯನ್ನು ಈ ಹಿಂದೆ ಇದ್ದ 30 ದಿನಗಳಿಂದ 7 ದಿನಗಳಿಗೆ ಪರಿಷ್ಕರಿಸಲಾಗಿರುತ್ತದೆ. ಅದರಂತೆ ಭೂಮಿ ತಂತ್ರಾಂಶದಲ್ಲಿ ನೋಂದಾಯಿತ ದಸ್ತವೇಜುಗಳ ನೋಟೀಸು ಅವಧಿಯನ್ನು 7 ದಿನಗಳಿಗೆ ಮಾರ್ಪಾಡು ಮಾಡಲಾಗಿದೆ.<br><br>ಈ ತಿದ್ದುಪಡಿಯಿಂದಾಗಿ ರಾಜ್ಯದಲ್ಲಿ ಸ್ಥಿರಾಸ್ತಿಗಳ ಮಾರಾಟದ ಕ್ರಯಪತ್ರಗಳು ನೋಂದಣಿಯಾಗಿ ಈ ಹಿಂದೆ 30 ದಿನಗಳ ಆಕ್ಷೇಪಣಾ ಅವಧಿ ಮುಕ್ತಾಯಗೊಂಡ ನಂತರ ಮಾಡಲಾಗುತ್ತಿದ್ದ ಖಾತೆ ಮತ್ತು ಪಹಣಿ ಬದಲಾವಣೆಯನ್ನು ಪ್ರಸ್ತುತ 7 ದಿನಗಳ ಆಕ್ಷೇಪಣಾ ಅವಧಿಯು ಮುಕ್ತಾಯಗೊಂಡ ನಂತರ ಮಾಡಲು ಕ್ರಮವಹಿಸಲಾಗುತ್ತಿದೆ. ಇದರಿಂದ ಆಸ್ತಿ ಖರೀದಿದಾರರು ನೋಂದಾಯಿತ ದಸ್ತವೇಜುಗಳ ಮೂಲಕ ಖರೀದಿಸಿದ ಆಸ್ತಿಗಳ ಖಾತೆ ಮತ್ತು ಪಹಣಿ ಬದಲಾವಣೆಗೆ ಹೆಚ್ಚು ಸಮಯ ಕಾಯಬೇಕಾಗಿದ್ದ ಸಮಸ್ಯೆಯು ನಿವಾರಣೆಯಾದಂತಾಗಿದೆ. |
| ಆ. | ಸ್ಥಿರಾಸ್ತಿಗಳ ಮಾರಾಟದ ಕ್ರಯಪತ್ರಗಳು ನೋಂದಣಿಯಾದ ನಂತರ ಖಾತೆ ಮತ್ತು ಪಹಣಿ ಬದಲಾವಣೆಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿರುವುದರಿಂದ, ಆಸ್ತಿ ಖರೀದಿದಾರರು ತಿಂಗಳುಗಟ್ಟಲೆ ಅಲೆದಾಡಬೇಕಾದ ಹಾಗೂ ಆಸ್ತಿ ಖರೀದಿದಾರರಿಗೆ ಬ್ಯಾಂಕ್‌ಗಳಲ್ಲಿ ಸಕಾಲದಲ್ಲಿ ಸಾಲ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ. | ಬಂದಿದ್ದಲ್ಲಿ, ಆಸ್ತಿ ಖರೀದಿದಾರರಿಗೆ ಆಗುತ್ತಿರುವ ಈ ಸಮಸ್ಯೆಗಳನ್ನು ತಪ್ಪಿಸಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ ? | |

**ಸಂಖ್ಯೆ:ಕಂಇ 185 ಟಿಆರ್‌ಎಂ 2022**

(ಆರ್. ಅಶೋಕ)
ಕಂದಾಯ ಸಚಿವರು